# ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಗಮನ ಸೆಳೆಯು ಸೂಚನೆ:** ಬೆಂಗಳೂರು ಉತ್ತರ ತಾಲ್ಲೂಕು, ಕಸಬ ಹೋಬಳಿ, ನಾಗವಾರ ಗ್ರಾಮದ ಸರ್ವೆ ನಂ: 135/1ರಲ್ಲಿ ಟ್ಯಾನರಿ ರಸ್ತೆಯಿಂದ ನಾಗವಾರದವರೆಗೆ ಬಿ.ಎಂ.ಆರ್.ಸಿ.ಎಲ್.ಗೆ ಕೆ.ಐ.ಎ.ಡಿ.ಬಿ. ವತಿಯಿಂದ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಆದರೆ ಸದರಿ ಜಮೀನು ಬಿ.ಡಿ.ಎ. ಸ್ವಾಧೀನದಲ್ಲಿದ್ದರೂ ಕಾನೂನು ಬಾಹಿರವಾಗಿ ಕೆ.ಐ.ಎ.ಡಿ.ಬಿ. ಭೂಸ್ವಾಧೀನ ಅಧಿಕಾರಿಗಳು ಹಾಗೂ ಕೆ.ಐ.ಎ.ಡಿ.ಬಿ. ಕಾನೂನು ಅಧಿಕಾರಿಗಳು ಷಾಮೀಲಾಗಿ, ನೈಜತೆ ಇಲ್ಲದೆ ಎನ್.ಒ.ಸಿ. ಪರಿಶೀಲಿಸದೆ ಉದ್ದೇಶ ಪೂರ್ವಕವಾಗಿ ಸದರಿ ಜಮೀನನ್ನು ಸರ್ವೆ ಮಾಡದೆ ಭೂ ಪರಿಹಾರದ ಮೊತ್ತವನ್ನು ಭೂಮಾಲೀಕರಿಗೆ ನೀಡಲಾಗಿರುತ್ತದೆ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿರುವ ಬಗ್ಗೆ ಹಾಗೂ ತಪ್ಪು ಮಾಹಿತಿ ನೀಡುತ್ತಿರುವ ಗಂಭೀರ ಸಮಸ್ಯೆ ಕುರಿತು.

**ಹೇಳಿಕೆ:**

ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತದ ರೀಚ್-6ರ ಗೊಟ್ಟಿಗೆರೆಯಿಂದ ನಾಗವಾರವರೆಗಿನ (ಎತ್ತರಿಸಿದ ಮಾರ್ಗ 7.5 ಕಿ.ಮೀ ಮತ್ತು ಸುರಂಗ ಮಾರ್ಗ 13.76 ಕಿ.ಮೀ) ನಾಗವಾರ ಮೆಟ್ರೋ ನಿಲ್ದಾಣದ ಸಲುವಾಗಿ ನಾಗವಾರ ಗ್ರಾಮದ ಸ.ನಂ.135/1 ರಲ್ಲಿ ಕೆಐಎಡಿ ಕಾಯ್ದೆ 1966 ರ ವಿಧಿ 28(4) ರ ಅಧಿಸೂಚನೆ ಸಂಖ್ಯೆ: ಸಿಐ 93 ಎಸ್.ಪಿ.ಕ್ಯೂ 2018, ದಿನಾಂಕ:17.01.2019 ರಂತೆ ಸ.ನಂ.135/1 ರಲ್ಲಿ 5 ಸ್ವತ್ತುಗಳಿಂದ 1333.55 ಚ.ಮೀ ವಿಸ್ತೀರ್ಣದ ಸ್ವತ್ತನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಭೂಪರಿಹಾರವನ್ನು ಪಾವತಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆ.ಐ.ಎ.ಡಿ.ಬಿ ರವರಿಗೆ ಕಳುಹಿಸಿಕೊಡಲಾಗಿರುತ್ತದೆ.

ಪರಿಹಾರ ವಿತರಿಸುವ ಸಂಧರ್ಭದಲ್ಲಿ ಮಾಲೀಕತ್ವದ ಸಮಸ್ಯೆ ಉಂಟಾಗಿದುದ್ದರಿಂದ ಬಿಡಿಎ ಯವರಿಗೆ ಪತ್ರ ಬರೆಯಲಾಗಿ, ಬಿಡಿಎ ಆಯುಕ್ತರು ದಿನಾಂಕ:30-08-2019ರ ಪತ್ರದಲ್ಲಿ ಸರ್ವೆ ನಂ.135/1 ರಲ್ಲಿ 0-32 ಗುಂಟೆ ಜಮೀನಿನ ಪೈಕಿ 0-20 ಗುಂಟೆ ಜಮೀನನ್ನು ಪ್ರಾಧಿಕಾರದ ಅರ್ಕಾವತಿ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಿದ್ದು, ಸದರಿ ಜಮೀನಿಗೆ ಐತೀರ್ಪು ಅನುಮೋದನೆಯಾಗಿದ್ದು, ಪ್ರಾಧಿಕಾರದ ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿರುತ್ತದೆ ಮತ್ತು ಭೂಸ್ವಾಧೀನ ಪಡಿಸಿಕೊಂಡ ಸದರಿ ಜಮೀನಿಗೆ ಭೂಪರಿಹಾರವನ್ನು ಪಾವತಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ತದನಂತರ ಈ ಬಗ್ಗೆ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಿ ಪತ್ರ ಬರೆದಂತಹ ಸಂಧರ್ಭದಲ್ಲಿ ಸರ್ಕಾರವು ಕಾನೂನು ಶಾಖೆಯಿಂದ ಅಭಿಪ್ರಾಯವನ್ನು ಪಡೆದು ಸದರಿ ಅಭಿಪ್ರಾಯದಂತೆ ಕ್ರಮ ಕೈಗೊಳ್ಳಲು ದಿನಾಂಕ:07-11-2019ರ ಪತ್ರದಲ್ಲಿ ತಿಳಿಸಲಾಗಿದ್ದು, ಸದರಿ ಪತ್ರದ ಪ್ರತಿಯನ್ನು **ಅನುಬಂಧ-1** ರಲ್ಲಿರಿಸಿದೆ ಮತ್ತು ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಭಿಪ್ರಾಯವನ್ನು **ಅನುಬಂಧ-2** ರಲ್ಲಿರಿಸಿದೆ. ಪ್ರಧಾನ ಕಾರ್ಯದರ್ಶಿಗಳ ಅಭಿಪ್ರಾಯದಂತೆ ಬೆಂಗಳೂರು ಪ್ರಾಧಿಕಾರಕ್ಕೆ ಭೂಸ್ವಾಧೀನವಾದ ಸ್ವತ್ತನ್ನು Right to fair compensation and Transparency in Land Acquisition, Rehabilitation and Resettlement

Act 2013 ಕಾಯ್ದೆ ಜಾರಿಗೆ ಬರುವ ಪೂರ್ವದಲ್ಲಿ 5 ವರ್ಷದ ಮೊದಲು ಭೂಸ್ವಾಧೀನವಾದ ಸ್ವತ್ತನ್ನು ಸ್ವಾಧೀನಪಡೆಯದೆ ಇದ್ದಲ್ಲಿ ಸದರಿ ಭೂಸ್ವಾಧೀನ ಪ್ರಕ್ರಿಯೆಯು ಆಸಿಂಧುವಾಗುತ್ತದೆ ಎಂದು ಉಲ್ಲೇಖವಿರುವುದು ಈ ಪ್ರಕರಣಕ್ಕೆ ನೇರವಾಗಿ ಅನ್ವಯವಾಗುತ್ತದೆ ಎಂದು, ಆದ್ದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಡೆಸಲಾದ ಭೂಸ್ವಾಧೀನ ಪ್ರಕ್ರಿಯೆ Lapsed ಎಂದು ಪರಿಗಣಿಸಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ ವರದಿಯನ್ನು ಅನುಸರಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಸರ್ಕಾರವು ನಿರ್ದೇಶಿಸಿರುವ ಹಿನ್ನಲೆಯಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಕೆ.ಐ.ಎ.ಡಿ.ಬಿ ಇವರು ಸರ್ವೆ 135/1 ರಲ್ಲಿ ಭೂಸ್ವಾಧೀನವಾಗಿರುವ ಸ್ವತ್ತುಗಳ ಮಾಲೀಕರಿಗೆ ಪರಿಹಾರ ಪಾವತಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಬಿಡಿಎ ರವರಿಂದ ಎನ್.ಓ.ಸಿ ಪಡೆಯುವ ಅವಶ್ಯಕತೆ ಇರುವುದಿಲ್ಲವೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ ರವರು ಪರಿಗಣಿಸಿರುತ್ತಾರೆ.

ಸರ್ಕಾರದ ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಭಿಪ್ರಾಯವನ್ನು ಪರಿಗಣಿಸಿ ಅರ್ಹ ಭೂಮಾಲೀಕರಿಗೆ ಪರಿಹಾರವನ್ನು ವಿತರಿಸಲಾಗಿರುತ್ತದೆ ಮತ್ತು ವಿತರಿಸುವ ಮುನ್ನ ಎಲ್ಲಾ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದು ಸರ್ಕಾರವು ತನ್ನ ಮಟ್ಟದಲ್ಲಿನ ಕಾನೂನು ಅಭಿಪ್ರಾಯವನ್ನು ಪಡೆದು ಕಳುಹಿಸಿ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುವ ಹಿನ್ನಲೆಯಲ್ಲಿ ಪರಿಹಾರ ಪಾವತಿಸಿರುತ್ತದೆ.

ಕಾನೂನಿನಂತೆ ಪರಿಹಾರ ಪಾವತಿಸಿರುವುದರಿಂದ ಈ ಕ್ರಮವನ್ನು ಅಕ್ರಮವೆಂದು ಪರಿಗಣಿಸಲು ಅವಕಾಶವಿಲ್ಲದೆ ಇರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಕಂಡುಬರುವುದಿಲ್ಲ ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಾನೂನು ಇಲಾಖೆ ರವರು ಪರಿಗಣಿಸಿರುತ್ತಾರೆ.

ಕಾನೂನಿನಂತೆ ಅರ್ಹ ಫಲಾನುಭವಿಗಳಿಗೆ ಪರಿಹಾರ ವಿತರಿಸಿರುವುದರಿಂದ ಭೂಮಾಲೀಕರಿಂದ ಪರಿಹಾರ ಧನ ಹಿಂಪಡೆಯುವ ಪ್ರಶ್ನೆಯು ಉದ್ಭವವಾಗುವುದಿಲ್ಲ ಮತ್ತು ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಕಂಡುಬರುವುದಿಲ್ಲ.

**ಸಂಖ್ಯೆ. ನಅಇ 33 ಪಿ.ಆರ್.ಜೆ 2023**

**(ಬಸವರಾಜ ಬೊಮ್ಮಾಯಿ)**

ಮುಖ್ಯಮಂತ್ರಿ

ಅನುಬಂಧ-1

46

# ಕರ್ನಾಟಕ ಸರ್ಕಾರ

ಸಂ: ಸಿಐ 128 ಎಸ್.ಪಿಕ್ಯೂ (ಇ) 2019

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 07.11.2019

ಇವರಿಂದ

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ,

ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ
ಕಾರ್ಯನಿರ್ವಾಹಕ ಸದಸ್ಯರು,
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ,
ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು

ಮಾನ್ಯರೇ,

ವಿಷಯ: ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತಕ್ಕಾಗಿ ಭೂಸ್ವಾಧೀನಪಡಿಸಿರುವ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳ, ಕಾಡುಗೊಂಡನಹಳ್ಳಿ ಗ್ರಾಮದ ಸರ್ವೆ ನಂ: 33, 34, 36, 60, 61, 138/5, 135/1, 135/2, 135/3, 139 ಮತ್ತು ನಾಗವಾರ ಗ್ರಾಮದ ಸರ್ವೆ ನಂ: 30/3, 154/2, 153/3, 155/1, 135/1, 135/2, 135/3, 138, 139, 140/1, 140/2, 140/3ರಲ್ಲಿನ ಸ್ವತ್ತುಗಳ ಕುರಿತು

ಉಲ್ಲೇಖ: ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ ಇವರಿಂದ ಸ್ವೀಕೃತವಾದ ಟಿಪ್ಪಣಿ.

--o--

....2

ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತಕ್ಕಾಗಿ ಭೂಸ್ವಾಧೀನಪಡಿಸಿರುವ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಕಾಡುಗೊಂಡನಹಳ್ಳಿ ಗ್ರಾಮದ ಸರ್ವೆ ನಂ: 33, 34, 36, 60, 61, 138/5, 135/1, 135/2, 135/3, 139 ಮತ್ತು ನಾಗವಾರ ಗ್ರಾಮದ ಸರ್ವೆ ನಂ: 30/3, 154/2, 153/3, 155/1, 135/1, 135/2, 135/3, 138, 139, 140/1, 140/2, 140/3ರಲ್ಲಿನ ಸ್ವತ್ತುಗಳ ಕುರಿತು ಉಲ್ಲೇಖಿತ ಟಿಪ್ಪಣಿಯಲ್ಲಿ ಸಲ್ಲಿಸಲಾದ ಪ್ರಸ್ತಾವನೆಯ ಬಗ್ಗೆ ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯದ ಉಧೃತ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯದಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

B. V. 7/11/19.

(ಬಿ. ವೆಂಕಟೇಶಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪ್ರತಿ: ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. (ಮೆಟ್ರೋ), ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು

ಅನುಬಂಧ - 2

ವಿಷಯ: ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತಕ್ಕಾಗಿ ಭೂಸ್ವಾಧೀನಪಡಿಸಿರುವ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಕಾಡುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.33, 34, 36, 60, 61, 138/5, 135/1, 135/2, 135/3, 139 ಮತ್ತು ನಾಗಾವಾರ ಗ್ರಾಮದ ಸರ್ವೆ ನಂ. 30/3, 154/2, 153/3, 155/1, 135/1, 135/2, 135/3, 138, 139, 140/1, 140/2, 140/3ರಲ್ಲಿನ ಸ್ವತ್ತುಗಳ ಕುರಿತು.

45

ಸಿಐ 128 ಎಸ್‌ಸಿಕ್ಯೂ (ಬ) 2019

---

ಬೆಂಗಳೂರು ಪಟ್ಟಣದ ಉತ್ತರ ತಾಲ್ಲೂಕು, ಕಸಬಾ ಹೋಬಳಿ ಕಾಡುಗೊಂಡನಹಳ್ಳಿಯ ಸರ್ವೆ ನಂ.33, 34, 36, 60, 61, 138/5, 135/1, 135/2, 135/3, 139 ಮತ್ತು ನಾಗವಾರ ಗ್ರಾಮದ ಸರ್ವೆ ನಂ. 30/3, 154/2, 153/3, 155/1, 135/1, 135/2, 135/3, 138, 139, 140/1, 140/2, 140/3ರಲ್ಲಿನ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡು 2ನೇ ಹಂತದ ಮೆಟ್ರೋ ರೈಲು ಯೋಜನೆ ಮಾಡುವ ಸಂಬಂಧ ಕೆಐಎಡಿಬಿ ಕಲಂ 28(4) ಅಡಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿ ಭೂಮಾಲೀಕರಿಗೆ ಪರಿಹಾರ ಹಣ ಪಾವತಿ ಮಾಡಬಹುದೇ ಎಂದು ಆಡಳಿತ ಇಲಾಖೆಯವರು ಅಭಿಪ್ರಾಯ ಕೋರಿ ಕಡತ ಸಲ್ಲಿಸಿರುತ್ತಾರೆ.

ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಸ್ವತ್ತುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಭೂಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಸಂಖ್ಯೆ: ಹೆಚ್‌ಯುಡಿ 567 ಎಂಎಲ್‌ಎಕ್ಸ್ 1984, ದಿನಾಂಕ:09.01.1985ರಲ್ಲಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿ, ದಿನಾಂಕ:18.06.2014ರಂದು ಅಂತಿಮ ಅಧಿಸೂಚನೆ ಹೊರಡಿಸಿರುತ್ತಾರೆ.

ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ದಿನಾಂಕ:30.08.2019ರಂದು ಪತ್ರ ಬರೆದು ಕಾಡುಗೊಂಡನಹಳ್ಳಿ ಗ್ರಾಮದ ಜಮೀನುಗಳಿಗೆ ಸಂಬಂಧಿಸಿದ ಹಾಗೆ 34 ವರ್ಷಗಳು ಕಳೆದಿದ್ದರಿಂದ ಪರಿಹಾರ ಕೊಡುವಂತಿಲ್ಲವೆಂದು ತಿಳಿಸಿರುತ್ತಾರೆ. ಇದೇ ರೀತಿ ನಾಗಾವಾರ ಗ್ರಾಮದ ಜಮೀನುಗಳಿಗೆ ಸಂಬಂಧಿಸಿದ ಹಾಗೆ ಸರ್ವೆ ನಂ.154/2, 153/3, 155/1 ಸ್ವತ್ತುಗಳಿಗೆ ಅವಾರ್ಡ್ ರಚಿಸಿ ನ್ಯಾಯಾಲಯದಲ್ಲಿ ಪರಿಹಾರ ಹಣ ಜಮಾ ಮಾಡಿರುವುದು ಕಂಡು ಬರುತ್ತದೆ.

ಇದೇ ರೀತಿ ಮತ್ತೊಂದು ಪ್ರಕರಣದಲ್ಲಿ ಬೈಲಸಂದ್ರ, ತಾವರೆಕೆರೆ, ಹುಳಿಮಾವು, ಬಿಳೇಕಹಳ್ಳಿ ಗ್ರಾಮದ ಸ್ವತ್ತುಗಳ ಭೂಸ್ವಾಧೀನ ವಿಳಂಬವಾದ ಪ್ರಕರಣದಲ್ಲಿ ಲ್ಯಾಪ್ಸ್ ಎಂದು ಪರಿಗಣಿಸಿದ ಸಂದರ್ಭದಲ್ಲಿ ಪರಿಹಾರ ಧನ ವಿತರಣೆ ಮಾಡಲು ಯಾವುದೇ ಭಾದಕ ಇರುವುದಿಲ್ಲವೆಂದು ದಿನಾಂಕ:12.07.2018ರಂದು ಕಾನೂನು ಇಲಾಖೆಯು ಅಭಿಪ್ರಾಯ ನೀಡಲಾಗಿರುತ್ತದೆ.

ಮುಂದುವರೆದು, ಶ್ರೀ ಭೀಮಾದಾಸ್ ಅಂಬಾವಾನಿ ಮತ್ತು ದೆಹಲಿ ವಿದ್ಯುತ್ ಕಂಪನಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ಹೊಸ ಅಧಿಸೂಚನೆ ಬಂದ ತರುವಾಯ ಹಳೆ ಅಧಿಸೂಚನೆ ತಾನಾಗೆ ರದ್ದಾಗುತ್ತದೆಯೆಂದು ಅಭಿಪ್ರಾಯ ನೀಡಿರುತ್ತದೆ. ದಿನಾಂಕ:24.10.2019ರಂದು ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಹಿಂದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನ ಪಡಿಸಿಕೊಳ್ಳಲು ಅಧಿಸೂಚನೆ ಆಗಿದ್ದು, ಅದೇ ಪ್ರದೇಶಗಳಲ್ಲಿ ಮೆಟ್ರೋ ಯೋಜನೆಗಾಗಿ ಅಧಿಸೂಚನೆ ಆಗಿರುವ ಸ್ವತ್ತುಗಳಿಗೆ ಮೆಟ್ರೋ ವತಿಯಿಂದ ಪರಿಹಾರ ಪಾವತಿ ಮಾಡುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ. 1985 ಮತ್ತು 2014ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭ ಮಾಡಿದ್ದು, ಅದೇ ಆಸ್ತಿಗಾಗಿ 2ನೇ ಹಂತದ ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಕಲಂ 28(4) ಅಡಿಯಲ್ಲಿ ದಿನಾಂಕ:17.01.2019ರಂದು ಅಂತಿಮ ಅಧಿಸೂಚನೆ ಹೊರಡಿಸಿದ್ದು ಕಂಡುಬರುತ್ತದೆ. ಹೀಗಾಗಿ, The provision of Right to fair compensation and Transparency in Land Acquisition, Rehabilitation and Resettlement Act-2013 ರ ಕಲಂ ಈ ಪ್ರಕರಣಕ್ಕೆ ನೇರವಾಗಿ ಅನ್ವಯವಾಗುತ್ತದೆ. ಸದರಿ ಕಲಂನ ಸಂಬಂಧಿತ ಭಾಗ ಈ ಕೆಳಕಂಡಂತಿದೆ:

ವಿಷಯ: ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತಕ್ಕಾಗಿ ಭೂಸ್ವಾಧೀನಪಡಿಸಿರುವ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಕಾಡುಗೊಂಡನಹಳ್ಳಿ ಗ್ರಾಮದ ಸರ್ವೆ ನಂ.33, 34, 36, 60, 61, 138/5, 135/1, 135/2, 135/3, 139 ಮತ್ತು ನಾಗವಾರ ಗ್ರಾಮದ ಸರ್ವೆ ನಂ. 30/3, 154/2, 153/3, 155/1, 135/1, 135/2, 135/3, 138, 139, 140/1, 140/2, 140/3ರಲ್ಲಿನ ಸ್ವತ್ತುಗಳ ಕುರಿತು.

ಸಂ 128 ಎಸ್‌ಒಪಿಸಿ (ಇ) 2019

---

"Land acquisition process under Act No.1 of 1894 shall be deemed to have lapsed in certain cases:-

(1) Notwithstanding anything contained in this Act, in any case of land acquisition proceedings initiated under the Land Acquisition Act, 1894- (a) where no award under section 11 of the said Land Acquisition Act has been made, the, all provisions of this Act relating to the determination of compensation shall apply; or (b) where an award under said section 11 has been made, then such proceedings shall continue under the provisions of the said Land Acquisition Act, as if the said Act has not been repealed.

(2) Notwithstanding anything contained in sub-section (1), in case of land acquisition proceedings initiated under the Land Acquisition Act, 1894 (1 of 1894) where an award under the sid section 11 has been made five years or more prior to the commencement of this Act but the physical possession of the land has not been taken or the compensation has not been paid the said proceedings shall be deemed to have lapsed and the appropriate Government if it so chooses. Shall initiate the proceedings of such land acquisition afresh in accordance with the provisions of this Act.

Provided that where an award has been made and compensation in respect of a majority of land holdings has not been deposited in the account of the beneficiaries, then, all beneficiaries specified in the notification for acquisition under section 4 of the said Land Acquisition Act, shall be entitled to compensation in accordance with the provisions of this Act.

ಆಡಳಿತ ಇಲಾಖೆಯವರು ಕಡತದಲ್ಲಿ ಉಲ್ಲೇಖಿಸಲಾದ ಪ್ರಕರಣವು 24(2) ನೇರವಾಗಿ ಅನ್ವಯ ಆಗದು. ಭೂಸ್ವಾಧೀನ ನಡೆದ ಹಿನ್ನಲೆಯಲ್ಲಿ ಪ್ರಾಧಿಕಾರದ ವತಿಯಿಂದ ನಡೆಸಲಾದ ಭೂಸ್ವಾಧೀನ ಪ್ರಕ್ರಿಯೆ Lapsed ಎಂದು ಪರಿಗಣಿಸಬೇಕಾಗುತ್ತದೆ. ಮತ್ತು ಈ ಹಿನ್ನಲೆಯಲ್ಲಿ ಪ್ರಾಧಿಕಾರವು ಅಭಿಪ್ರಾಯಪಟ್ಟಂತೆ ಭೂಮಾಲೀಕರಿಗೆ ಸಂಸ್ಥೆಯವರು ಪರಿಹಾರಧನವನ್ನು ವಿತರಣೆ ಮಾಡಲು ಯಾವುದೇ ಬಾಧಕ ಇರುವುದಿಲ್ಲವೆಂದು ಸದರಿ ಇಲಾಖೆಯು ಅಭಿಪ್ರಾಯಪಡಲಾಗಿದೆ.

S. 3. [signature]

(ಎಸ್.ಜಿ. ಪದ್ಮಾವತಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಾನೂನು ಇಲಾಖೆ.